62.	ಬಲಿಪಾಡಿ ಶ್ರೀ ಪಂಚಲಿಂಗೇಶ್ವರ ದೇವಸ್ಥಾನ	ಕುದ್ಮಾರು
63.	ಆತ್ಮೂರು ಶ್ರೀ ಸದಶಿವ ದೇವಸ್ಥಾನ	ತ್ಯೊಲಾ
64.	ಶ್ರೀ ಸುಬ್ರಹ್ಮಣ್ಯ ಸುಬ್ರಾಯ ದೇವಸ್ಥಾನ	ನೂಜಿ ಬಾಳ್ಕಿಲ
65.	ಶ್ರೀ ಸುಬ್ರಹ್ಮಣ್ಯ ಸುಬ್ರಾಯ ದೇವಸ್ಥಾನ	ಕುಟ್ರುಪಾಡಿ
67.	ಶ್ರೀ ಸುಬ್ರಹ್ಮಣ್ಯ ಸಂಪುಟ ನರಸಿಂಹ ದೇವಸ್ಥಾನ	ಕೊಂಬಾರು
68.	ಶ್ರೀ ಮರ್ದಳ ಮಹಾಲಿಂಗೇಶ್ವರ ದೇವಸ್ಥಾನ	ಐತ್ಮೂರು
69.	ಶ್ರೀ ಸುಬ್ರಹ್ಮಣ್ಯ ದೇವಸ್ಥಾನ	ಐತ್ಮೂರು
70.	ಶ್ರೀ ಸುಬ್ರಹ್ಮಣ್ಯ ಸುಬ್ರಾಯ ದೇವಸ್ಥಾನ	ಐತ್ಮೂರು
71.	ಶ್ರೀ ಷಣ್ಮುಖ ದೇವಸ್ಥಾನ	ನೆಕ್ಕಿಲಾಡಿ
72.	ಶ್ರೀ ಸುಬ್ರಹ್ಮಣ್ಯ ಸುಬ್ರಾಯ ದೇವಸ್ಥಾನ	ಕೊಂಡಿಬಾಳ
73.	ಶ್ರೀ ಸುಬ್ರಹ್ಮಣ್ಯ ಸುಬ್ರಾಯ ದೇವಸ್ಥಾನ	ಕಡಬ
74.	ಶ್ರೀ ಕಸ್ಲಾಡಿ ಕಪಿಲೇಶ್ವರ ದೇವಸ್ಥಾನ	ಚಾರ್ವಾಕ
75.	ಶ್ರೀ ಸಂಪುಟ ನರಸಿಂಹ ದೇವ ದೇವಸ್ಥಾನ ಮತ್ತು ಯಜ್ಞಮೂರ್ತಿ ದೇವಸ್ಥಾನ	ಬಳ್ವ
76.	ಶ್ರೀ ಸದಾಶಿವ ದೇವರ ದೇವಸ್ಥಾನ	ಚಾರ್ವಾಕ
77.	ಶ್ರೀ ಕುಂಟ್ಲಾಡಿ ಕುಕ್ಕೆನಾಥ ದೇವರು.	ಚಾರ್ವಾಕ

2028(3200) ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡಲು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ 5 ಸೆಂಟ್ಸ್‌ನಿಂದ 10 ಸೆಂಟ್ಸ್ ಸ್ಥಳವನ್ನು ಮಂಜೂರು ಮಾಡುವ ಅಧಿಕಾರ ಇದ್ದುದ್ದನ್ನು ಈಗ ಹಿಂದಕ್ಕೆ ಪಡೆದಿರುವುದು ನಿಜವೇ;

ಆ) ಈ ರೀತಿ ತಹಶೀಲ್ದಾರ್‌ರವರಿಗೆ ಇದ್ದ ಅಧಿಕಾರವನ್ನು ಹಿಂದಕ್ಕೆ ಪಡೆಯಲು ಕಾರಣವೇನು;

ಇ) ಇದರಿಂದ ಬಡ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಕರ್ನಾಟಕ ಭೂ ಮಂಜೂರಾತಿ ನಿಯಮಗಳಲ್ಲಿ 1969ರ ನಿಯಮ 18(6) ರನ್ವಯ ತಹಶೀಲ್ದಾರ್‌ರವರಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 2 ಏರ್ ಮತ್ತು ನಗರ ಪಂಚಾಯ್ತಿ

ವ್ಯಾಪ್ತಿಯಲ್ಲಿ 1 ಏರ್ಸ್ ಮೀರದಂತೆ ಬಡ ನಿವೇಶನ ರಹಿತರಿಗೆ ಮಂಜೂರಾತಿಸಲು ಅಧಿಕಾರ ನೀಡಿದ್ದನ್ನು ಇತ್ತೀಚೆಗೆ ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯನ್ವಯ ನಿಯಮ 18ಕ್ಕೆ ತಿದ್ದುಪಡಿಯನ್ನು ಪ್ರಸ್ತಾಪಿಸಿರುವುದಿಲ್ಲ. ಆದ್ದರಿಂದ ತಹಶೀಲ್ದಾರರ ಅಧಿಕಾರ ಹಿಂದಕ್ಕೆ ಪಡೆದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

2029(3201) ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಸುಳ್ಯ ಕಸಬಾ ಗ್ರಾಮದ ಮಿಲಿಟರಿ ಗ್ರಾಂಡ್‌ನಲ್ಲಿ ಮಿಲಿಟರಿಯವರಿಗಾಗಿ ಕಾದಿರಿಸಲಾದ ಸ್ಥಳದಲ್ಲಿ ಕಳೆದ 25 ವರ್ಷಗಳಿಂದ ಅನೇಕ ಪರಿಶಿಷ್ಟ ಜಾತಿ: ಪಂಗಡ ಮತ್ತು ಇತರ ವರ್ಗದವರು ಒತ್ತುವರಿ ಮಾಡಿಕೊಂಡು ಕೃಷಿಯನ್ನು ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಇದ್ದಲ್ಲಿ, ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

2030(3202) ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು–ಸುಳ್ಯ 110 ಕೆ.ವಿ. ಲೈನ್ ಕಾಮಗಾರಿ ಮಂಜೂರಾಗಿದ್ದು ಯಾವಾಗ;

ಆ) ಕಾಮಗಾರಿ ಈಗ ಯಾವ ಹಂತದಲ್ಲಿದೆ ಹಾಗೂ ಯಾವಾಗ ಮುಕ್ತಾಯಗೊಳ್ಳಲಿದೆ;

ಇ) ಕಾಮಗಾರಿಯ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) 110 ಕೆ.ವಿ. ಪುತ್ತೂರು–ಸುಳ್ಯ ಲೈನ್ ಕಾಮಗಾರಿಗೆ ದಿನಾಂಕ: 28.2.2005 ರಂದು ಮಂಜೂರಾತಿ ಆಗಿರುತ್ತದೆ.

ಆ) ಸದರೀ ಕಾಮಗಾರಿಗೆ ಈಗ ಮಂಜೂರಾತಿ ದೊರೆತಿರುವುದರಿಂದ, ಸಮಗ್ರ ಗುತ್ತಿಗೆ ಆಧಾರದ ಮೇಲೆ ಶೀಘ್ರದಲ್ಲೇ ಟೆಂಡರ್ ಕರೆಯಲಾಗುತ್ತದೆ. ಟೆಂಡರ್‌ನಲ್ಲಿ ಆಯ್ಕೆಯಾದ ಗುತ್ತಿಗೆದಾರರಿಗೆ ಸಮಗ್ರ ಗುತ್ತಿಗೆ ವಹಿಸಿಕೊಟ್ಟು ಸುಮಾರು 18 ತಿಂಗಳೊಳಗೆ ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಈ ಕಾಮಗಾರಿಯ ಅಂದಾಜು ವೆಚ್ಚ 1882.62 ಲಕ್ಷ ರೂ.ಗಳು.